ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಶಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE : 12/11/10

ವಿಧಾನಪರಿಷತ್ ಸಭಾಪತಿ ಸ್ಥಾನದ ಮೇಲೆ ಬಿಜೆಪಿ ಕಣ್ಣು | ಜೆಡಿಎಸ್ ಬೆಂಬಲ ಪಡೆದು ಕೆಳಗಿಳಿಸಲು ವೇದಿಕೆ ಸಜ್ಜು

# ಬಿಜೆಪಿ-ಜೆಡಿಎಸ್ ಮಧ್ಯೆ ಸಭಾಪತಿ ದೋಸ್ತಿ

ಎಸ್. ಲಕ್ಷ್ಮಿನಾರಾಯಣ

ಬೆಂಗಳೂರು: ವಿಧಾನಪರಿಷತ್‌ನಲ್ಲಿ ಬಹುಮತ ಕೊರತೆಯಿಂದಾಗಿ ಮಹತ್ವದ ವಿಧೇಯಕಗಳ ವಿಚಾರದಲ್ಲಿ ಹಿನ್ನಡೆ ಅನುಭವಿಸುತ್ತಿರುವ ಬಿಜೆಪಿ ಇದೀಗ ಜೆಡಿಎಸ್ ಬೆಂಬಲದೊಂದಿಗೆ 'ಸಭಾಪತಿ' ಹುದ್ದೆ ತನ್ನದಾಗಿಸಿಕೊಳ್ಳಲು ಕಾರ್ಯತಂತ್ರ ರೂಪಿಸಿದೆ.

ವಿಧಾನಸಭೆಯಲ್ಲಿ ಉಪ ಸಭಾಧ್ಯಕ್ಷರನ್ನು ಇಳಿಸಿದ ರೀತಿಯಲ್ಲೇ ವಿಧಾನಪರಿಷತ್‌ನಲ್ಲೂ ಸಭಾಪತಿ ಇಳಿಸಲು ವೇದಿಕೆ ಸಜ್ಜುಗೊಳಿಸಲಾಗುತ್ತಿದೆ.

ವಿಧಾನಪರಿಷತ್‌ನ ನಾಲ್ಕು ಸ್ಥಾನ ಗೆಲ್ಲುವ ಮೂಲಕ 31ಕ್ಕೆ ಸಂಖ್ಯಾಬಲ ಹೆಚ್ಚಿಸಿಕೊಂಡಿರುವ ಬಿಜೆಪಿಗೆ ಜೆಡಿಎಸ್‌ನ ಬೆಂಬಲ ಸಿಕ್ಕರೆ ಸಭಾಪತಿ ಸ್ಥಾನ ಪಡೆಯುವುದು ಸುಲಭ. ಜೆಡಿಎಸ್ ವಲಯದಲ್ಲೂ ಬಿಜೆಪಿಗೆ ಬೆಂಬಲ ಕೊಡುವ ಬಗ್ಗೆ ಸಕಾರಾತ್ಮಕ ಸ್ಪಂದನೆ ವ್ಯಕ್ತವಾಗಿದೆ. ಈಗಾಗಲೇ ಜೆಡಿಎಸ್ ನಾಯಕರ ಜತೆ ಬಿಜೆಪಿ ನಾಯಕರು ಚರ್ಚೆ ನಡೆಸಿದ್ದಾರೆ ಎಂದು ವಿಶ್ವಸನೀಯ ಮೂಲಗಳು ತಿಳಿಸಿವೆ.

ವಿಧಾನಪರಿಷತ್‌ನಲ್ಲಿ ಪ್ರಸ್ತುತ ಕಾಂಗ್ರೆಸ್‌ನ ಪ್ರತಾಪಚಂದ್ರಶೆಟ್ಟಿ ಸಭಾಪತಿಯಾಗಿದ್ದು ಜೆಡಿಎಸ್‌ನ ಧರ್ಮೇಗೌಡ ಉಪ ಸಭಾಪತಿಯಾಗಿದ್ದಾರೆ.

## ಕರಾವಳಿ ಭಾಗಕ್ಕೆ ಸಭಾಪತಿ ಪಟ್ಟ?

**ವಿಧಾನಪರಿಷತ್‌ನಲ್ಲಿ ಸಭಾಪತಿ ಹುದ್ದೆ ಬಿಜೆಪಿಗೆ ದೊರೆತರೆ ಕರಾವಳಿ ಭಾಗದವರಿಗೇ ನೀಡುವ ಸಾಧ್ಯತೆಯಿದೆ ಎಂದು ಹೇಳಲಾಗಿದೆ. ಸಂಪುಟ ವಿಸ್ತರಣೆಯಲ್ಲಿ ಮೇಲ್ಮನೆ ಸದಸ್ಯರಿಗೆ ಹೆಚ್ಚಿನ ಅವಕಾಶ ನೀಡುವ ಅನಿವಾರ್ಯತೆಯೂ ಇರುವುದರಿಂದ ಪರಿಷತ್‌ನಿಂದ ಸಚಿವರಾಗಿರುವವರ ಪೈಕಿ ಒಬ್ಬರನ್ನು ಕೈ ಬಿಡಬಹುದು ಎಂದು ಹೇಳಲಾಗಿದೆ.**

**ಸಭಾಪತಿ ವಿರುದ್ಧ ಅವಿಶ್ವಾಸ?:** ಈಗಿನ ಮಾತುಕತೆ ಪ್ರಕಾರ ಮುಂದಿನ ಚಳಿಗಾಲದ ಅಧಿವೇಶನ ಅಥವಾ ಜನವರಿಯಲ್ಲಿ ನಡೆಯಲಿರುವ ಜಂಟಿ ಅಧಿವೇಶನ ಸಂದರ್ಭದಲ್ಲಿ ಸಭಾಪತಿ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲು ತೀರ್ಮಾನಿಸಲಾಗಿದೆ ಎಂದು ಹೇಳಲಾಗಿದೆ.




ವಿಧಾನಪರಿಷತ್‌ನಲ್ಲಿ ಪ್ರಮುಖ ವಿಧೇಯಕಗಳ ಅಂಗೀಕಾರ ಪಡೆಯಲು ಆಡಳಿತಾರೂಢ ಬಿಜೆಪಿಗೆ ಬಹುಮತ ಇಲ್ಲದ ಕಾರಣ ಹಿನ್ನಡೆಯುಂಟಾಗುತ್ತಿದೆ. ಇತ್ತೀಚೆಗೆ ಭೂ ಸುಧಾರಣೆ, ಎಪಿಎಂಸಿ, ಕಾರ್ಮಿಕ ಕಾಯ್ದೆಗಳು ಪರಿಷತ್‌ನಲ್ಲಿ ಅಂಗೀಕಾರವಾಗದ ಕಾರಣ ಮತ್ತೆ ಸಂಪುಟಕ್ಕೆ ತಂದು ಸುಗ್ರೀವಾಜ್ಞೆ ಹೊರಡಿಸಬೇಕಾಯಿತು. ಹೀಗಾಗಿ, ಪರಿಷತ್‌ನಲ್ಲೂ ನಮ್ಮವರೇ ಸಭಾಪತಿ ಇದ್ದರೆ ಸಮಸ್ಯೆಯಾಗದು ಎಂಬುದು ಬಿಜೆಪಿ ಲೆಕ್ಕಾಚಾರವಾಗಿದೆ. ಈ ಹಿಂದೆ ವಿಧಾನಪರಿಷತ್‌ನಲ್ಲಿ ಕಾಂಗ್ರೆಸ್ ಹೆಚ್ಚು ಸ್ಥಾನ ಹೊಂದಿತ್ತು. ಆದರೆ, ಇತ್ತೀಚೆಗೆ ಐದು ಸ್ಥಾನಗಳ ನಾಮಕರಣ ಹಾಗೂ ಎಂಟು ಸ್ಥಾನಗಳ ಚುನಾವಣೆ ನಂತರ ಬಿಜೆಪಿ ಬಲ 27 ಕ್ಕೆ ಏರಿತ್ತು. ಇದೀಗ ಶಿಕ್ಷಕರು ಹಾಗೂ ಪದವೀಧರರ ನಾಲ್ಕು ಸ್ಥಾನಗಳಲ್ಲೂ ಬಿಜೆಪಿ ಜಯಗಳಿಸಿರುವುದರಿಂದ ಬಿಜೆಪಿ ಸಂಖ್ಯಾಬಲ 31ಕ್ಕೆ ಏರಿಕೆಯಾಗಿದೆ.

ಪರಿಷತ್‌ನಲ್ಲಿ ಒಟ್ಟಾರೆ ಸಂಖ್ಯಾಬಲ 75. ಬಹುಮತಕ್ಕೆ 38 ಸದಸ್ಯರ ಅಗತ್ಯ ಇದೆ. ಬಿಜೆಪಿ 31 ಸದಸ್ಯರನ್ನು ಹೊಂದಿದೆ. ಪಕ್ಷೇತರ ಸದಸ್ಯರೊಬ್ಬರ ಬೆಂಬಲವೂ ಪಡೆದರೆ ಆರು ಮತಗಳ ಕೊರತೆಯಾಗಲಿದೆ. ಕಾಂಗ್ರೆಸ್ 28 ಹಾಗೂ ಜೆಡಿಎಸ್ 14 ಸ್ಥಾನ ಹೊಂದಿದೆ.

ಹಿಂದೊಮ್ಮೆ ಬಿಜೆಪಿಯ ಡಿ.ಎಚ್.ಶಂಕರ ಮೂರ್ತಿ ಅವರು ವಿಧಾನಪರಿಷತ್ ಸಭಾಪತಿಯಾಗಿದ್ದಾಗ ಕಾಂಗ್ರೆಸ್ ಪಕ್ಷವು ಸಭಾಪತಿ ವಿರುದ್ಧ ಅವಿಶ್ವಾಸ ನಿರ್ಣಯಕ್ಕೆ ಮುಂದಾಗಿ ಜೆಡಿಎಸ್ ಬೆಂಬಲ ಕೋರಿದಾಗ ಅದು ನಿರಾಕರಿಸಿತ್ತು.